<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ</u>
<u>ಮೊಳಕಾಲ್ಮೂರು</u>

ದಾವಾ ಸಂಖ್ಯೆ: ಓಎಸ್. ಸಂಖ್ಯೆ: 230/2018

ಪಿ.ಡಬ್ಲ್ಯೂ. 1

ದಿನಾಂಕ: 17.03. 2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: 1 ಮತ್ತು 3 ನೇ ಪ್ರತಿವಾದಿಯರ ಪರ ವಕೀಲರಿಂದ</u>**

ದಾವಾ ಸ್ವತ್ತಿನ ಖಾತೆ ಸಂಖ್ಯೆ: 417 ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ವಾಗಿ ಬಂದಿರುತ್ತದೆ ಎಂದು ನಿಪಿ 1 ರಲ್ಲಿ ಬರೆದಿರುತ್ತದೆ ಎಂದರೆ ಸರಿ. ದಾವ ಸ್ವತ್ತು ಪಿತ್ರಾರ್ಜಿತ ಆಸ್ತಿಯಾದ ಕಾರಣ ನನ್ನ ಒಬ್ಬಳಿಗೆ ಹಕ್ಕು ಅಧಿಕಾರ ಇರುವುದಿಲ್ಲ, 1 ರಿಂದ 3 ನೇ ಪ್ರತಿವಾದಿಗಳಿಗೂ ಸಹ ದಾವಾ ಸ್ವತ್ತಿನಲ್ಲಿ ಹಕ್ಕು ಅಧಿಕಾರ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾತ ಸಂಪಾಧಿಸಿದ ಆಸ್ತಿ ನನ್ನದು ಎಂದು ನುಡಿದಿರುತ್ತಾರೆ. ನನ್ನ ತಾತನ ಹೆಸರು ಗಿಡ್ಡಪ್ಪ ಎಂದು ಇರುತ್ತದೆ. ನನ್ನ ತಾತ ಎಂದರೆ ನನ್ನ ಗಂಡನ ತಂದೆ. ಮನೆಯ ಯಜಮಾನರು ಬಸವರಾಜ ಆಗಿದ್ದು ಎಂದರೆ ಸರಿ. ಬಸವರಾಜರವರಿಗೆ ಅವರ ತಂದೆಯ ಆಸ್ತಿಯಾದ ಕಾರಣ ಅವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ನನ್ನ ತಾತ ಗಿಡ್ಡಪ್ಪ ಮೃತ ಪಟ್ಟ ನಂತರ ಖಾತೆ ನನ್ನ ಹೆಸರಿಗೆ ಇರುತ್ತದೆ. ಖಾತೆ ಮಾತ್ರ ನನ್ನ ಹೆಸರಿಗೆ ಇದ್ದು, ಸ್ವಾಧೀನ 1 ರಿಂದ 3 ನೇ ಪ್ರತಿವಾದಿಯರು ಇರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಮೊಳಕಾಲ್ಮೂರು